

بِسْمِ اللهِ الرَّحْمٰنِ الرَّحِيم

# ಸತ್ಯ ಸಂಧತೆ ಮತ್ತು ನ್ಯಾಯ ನಿಷ್ಠೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 25-11-2016 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಖುರ್‌ಆನ್ ವಚನ ಪಠಿಸಿದರು:*

يَا أَيُّهَا الَّذِينَ آمَنُوا كُونُوا قَوَّامِينَ بِالْقِسْطِ شُهَدَاءَ لِلَّهِ وَلَوْ عَلَى أَنفُسِكُمْ أَوْ الْوَالِدَيْنِ وَالأَقْرَبِينَ إِنْ يَكُنْ غَنِيًّا أَوْ فَقِيرًا فَاللَّهُ أَوْلَى بِهِمَا فَلاَ تَتَّبِعُوا الْهَوَى أَنْ تَعْدِلُوا وَإِنْ تَلْوُوا أَوْ تُعْرِضُوا فَإِنَّ اللَّهَ كَانَ بِمَا تَعْمَلُونَ خَبِيرًا

**ಯಾ ಅಯ್ಯುಹಲ್ಲಝೀನ ಆಮನೂ ಕೂನೂ ಖವ್ವಾಮೀನ ಬಿಲ್‌ಖಿಸ್ತಿ ಶುಹದಾಅ ಲಿಲ್ಲಾಹಿ ವ ಲವ್ ಅಲಾ ಅನ್‌ಫುಸಿಕುಮ ಅವಿಲ್ ವಾಲಿದೈನಿ ವಲ್ ಅಖ್‌ರಬೀನ್ ಇನ್‌ಯಕುನ್ ಗನಿಯ್ಯನ್ ಅವ್ ಫಖೀರನ್ ಫಲ್ಲಾಹು ಅವ್‌ಲಾ ಬಿಹಿಮಾ ಫಲಾ ತತ್ತಬಿಉಲ್ ಹವಾ ಅನ್ ತಅ್‌ದಿಲೂ ವಇನ್ ತಲ್‌ಊ ಅವ್ ತುಅ್‌ರಿಝೂ ಫ ಇನ್ನಲ್ಲಾಹ ಕಾನ ಬಿಮಾ ತಅ್‌ಮಲೂನ ಖಬೀರ.**

ಓ ಸತ್ಯವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯ ವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವನು ಧನಿಕನಾಗಿರಲಿ ಯಾ ದರಿದ್ರನಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ. ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗಪಡಿಸದೆ) ನುಣುಚಿಕೊಂಡರೆ (ತಿಳಿದು ಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. (ಪವಿತ್ರ ಖುರ್‌ಆನ್ 4:136).

ನಾವು ಲೋಕದ ಜನರೊಂದಿಗೆ ಹೇಳುತ್ತೇವೆ: ಲೋಕದ ಸಮಸ್ಯೆಗಳಿಗೆ ಪರಿಹಾರ ಇಸ್ಲಾಮೀ ಉಪದೇಶಗಳಲ್ಲಿದೆ ಎಂದು. ಅದರ ಬಗ್ಗೆ ನಾವು ಪವಿತ್ರ ಖುರ್‌ಆನಿನ ಉಪದೇಶಗಳನ್ನು ವಿವರಿಸುತ್ತೇವೆ. ನಾನು ಕೆನಡದಲ್ಲಿ ಪ್ರವಾಸದಲ್ಲಿದ್ದಾಗ ಒಬ್ಬ ಜರ್ನಲಿಸ್ಟ್ ನನ್ನೊಂದಿಗೆ ಕೇಳಿದರು: ಇಂದಿನ ಕಾಲದ ಸಮಸ್ಯೆಗಳಿಗೆ ನೀವು ಯಾವ ಪರಿಹಾರ ಮಾರ್ಗ ಸೂಚಿಸುತ್ತೀರಿ ಎಂದು. ನಾನು ಹೀಗೆ ಉತ್ತರ ನೀಡಿದೆ: ನೀವು, ಎಂದರೆ ಲೋಕದ ಜನರು, ಮತ್ತು ಲೋಕದ ಮಹಾಶಕ್ತಿ ರಾಷ್ಟ್ರಗಳು ಲೋಕದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು, ಲೋಕದಿಂದ ಉಗ್ರವಾದವನ್ನು ತಡೆಗಟ್ಟಲು ನೀವು ನಿಮ್ಮ ಅಭಿಪ್ರಾಯ ಪ್ರಕಾರ ಎಲ್ಲ ಪ್ರಯತ್ನಗಳನ್ನು ಮಾಡಿರುವಿರಿ. ಆದರೆ ಸಮಸ್ಯೆಗಳು ಹಿಂದಿನ ಹಾಗೆಯೇ ಈಗಲೂ ಇವೆ. ಆದರೆ ಒಂದು ಪ್ರಯತ್ನ ನೀವು ಇಂದಿನ ತನಕ ಮಾಡಿಲ್ಲ. ಅದು ಇಸ್ಲಾಮೀ ತತ್ವಗಳ ಬೆಳಕಿನಲ್ಲಿ ಸಮಸ್ಯೆಗಳಿಗೆ ಮಾಡಬೇಕಾದ ಪರಿಹಾರ ಮಾರ್ಗವಾಗಿದೆ. ನನ್ನ ಮಾತನ್ನು ಆಲಿಸಿ ಅವರು ಮೌನವಾಗುತ್ತಾರೆ. ಆದರೆ ಯಾವುದೇ ಜರ್ನಲಿಸ್ಟ್ ಸಹ ನನ್ನೊಂದಿಗೆ ಇಷ್ಟರ ತನಕ ಕೇಳಲಿಲ್ಲ– ಇಸ್ಲಾಮಿನ ಆಜ್ಞೆಗಳನ್ನು ಅನುಷ್ಠಾನಕ್ಕೆ ತಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದ್ದರೆ, ಮೊದಲು ಇಸ್ಲಾಮೀ ದೇಶಗಳು ಆ ಆಜ್ಞೆಗಳನ್ನು ಪಾಲಿಸಿ ತಮ್ಮ ಸುಧಾರಣೆ ಮಾಡಬಹುದಾಗಿತ್ತಲ್ಲಾ ಎಂದು. ಆದರೆ ಅವರ ಮನಸ್ಸಿನಲ್ಲಿ ಈ ಪ್ರಶ್ನೆ ಏದ್ದೇಳಬಹುದಾಗಿದೆ. ಆದುದರಿಂದ ಸಾಮಾನ್ಯವಾಗಿ ನಾನು ಅನ್ಯರ ಮುಂದೆ ಭಾಷಣ ಮಾಡುವಾಗ ನಾನು ಮೊತ್ತಮೊದಲು ಮುಸ್ಲಿಮರ ಸ್ಥಿತಿಯನ್ನು ಪ್ರಸ್ತಾಪಿಸಿ ಅನಂತರ ಶಕ್ತಿರಾಷ್ಟ್ರಗಳ ವಾಸ್ತವಿಕ ಮುಖವನ್ನು ತೋರಿಸಿಕೊಡುತ್ತೇನೆ. ನಾನು ಜರ್ನಲಿಸ್ಟ್‌ಗಳ ಮುಂದೆ ಮತ್ತು ವಿವಿಧ ಸಂದರ್ಶನ ವೇಳೆಗಳಲ್ಲಿ ಹೀಗೆ ಹೇಳುತ್ತೇನೆ: ಮುಸ್ಲಿಮರು ಇಸ್ಲಾಮೀ ತತ್ವಗಳನ್ನು ಪಾಲಿಸದೆ ಇರುವುದು ಸಹ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯತೆಗೆ ಸಾಕ್ಷ್ಯಾಧಾರವಾಗಿದೆ. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಪಷ್ಟವಾಗಿ ಹೇಳಿದ್ದರು: ಮುಸ್ಲಿಮರು ಇಸ್ಲಾಮೀ ತತ್ವಗಳ ವಾಸ್ತವಿಕಾಂಶಗಳನ್ನು ಮರೆತುಬಿಡುವರು. ಅವರು ತಮ್ಮ ಸ್ವಾರ್ಥ ಅಭಿಲಾಷೆಗಳಿಗೆ ಮತ್ತು ಇಂದ್ರಿಯಾಸಕ್ತಿಗಳಿಗೆ ಆದ್ಯತೆ ನೀಡುವರು ಅಂತಹ ಒಂದು ಕಾಲ ಬರಲಿದೆ ಎಂದು. ಆ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಸೇವಕ ಆಗಮಿಸುವರು. ಇದರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿಯೂ ಪ್ರಸ್ತಾಪಿಸಲಾಗಿದೆ. ಅವರು ಆಗಮಿಸುವ ಕಾಲಘಟ್ಟದ ಬಗ್ಗೆ ಚಿಹ್ನೆಗಳನ್ನು ಪವಿತ್ರ ಖುರ್‌ಆನ್ ಸಹ ವಿವರಿಸಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಸ್ಪಷ್ಟವಾಗಿ ವಿವರಿಸಿದ್ದಾರೆ. ಆದುದರಿಂದ ಇಂದಿನ ಪರಿಸ್ಥಿತಿ ನೋಡುವಾಗ ಒಬ್ಬ ಅಹ್ಮದಿ ಮುಸ್ಲಿಮನು ಗಾಬರಿಗೊಳ್ಳುವುದಕ್ಕೆ ಬದಲಾಗಿ ಒಂದು ರೀತಿಯಲ್ಲಿ ಸಂತೋಷಪಡುತ್ತಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರ ಬಗ್ಗೆ ವಿವರಿಸಿದ್ದು ಮತ್ತು ವಿಶಿಷ್ಟವಾಗಿ ಮುಸ್ಲಿಮ್ ಮತಪಂಡಿತರ ಬಗ್ಗೆ ವಿವರಿಸಿದ್ದು ಮತ್ತು ಅವರ ಸ್ಥಿತಿಯ ಬಗ್ಗೆ ಭವಿಷ್ಯ ನುಡಿದಿರುವುದು ಈಡೇರಿದ ಬಗ್ಗೆ ನಾವು ತೃಪ್ತರಾಗಿದ್ದೇವೆ. ಅಹ್ಮದಿ ಮುಸ್ಲಿಮರಾದ ನಮಗೆ ಇನ್ನೊಂದು ವಿಷಯದಲ್ಲಿ ಸಹ ಸಂತೋಷವಿದೆ. ಅದೇನೆಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಯ ನಂತರದ ಭಾಗ

ಸಹ ಈಡೇರಿರುವುದಾಗಿ ನಾವು ನಂಬುತ್ತೇವೆ. ಅಲ್ಲಾಹನು ಕಳುಹಿಸಿರುವ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ಗುಲಾಮರಾದ ವಾಗ್ದತ್ತ ಮಹ್‌ದೀ ಮಸೀಹರನ್ನು ನಂಬುವವರು ನಾವಾಗಿದ್ದೇವೆ.

ಆದರೆ ಇಷ್ಟು ಮಾತ್ರ ನಾವು ನಮ್ಮ ಉದ್ದೇಶ ಲಕ್ಷ್ಯವನ್ನು ಗಳಿಸುವವರನ್ನಾಗಿ ಮಾಡುವುದೇ? ಇದು ಎಂತಹ ಪ್ರಶ್ನೆ ಎಂದರೆ ನಮ್ಮ ಪೈಕಿ ಪ್ರತಿಯೊಬ್ಬನು ಇದರ ಬಗ್ಗೆ ಚಿಂತಿಸಬೇಕಾಗಿದೆ. ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನವನ್ನು ನಾನು ನನ್ನ ಅನೇಕ ಭಾಷಣಗಳಲ್ಲಿ ಅನ್ಯರ ಮುಂದೆ ಪ್ರಸ್ತಾಪಿಸಿರುವೆನು. ನಾನು ಅವರೊಂದಿಗೆ ಹೀಗೆ ಹೇಳುತ್ತೇನೆ. ಇಸ್ಲಾಮ್ ನ್ಯಾಯಪಾಲನೆ ಮಾಡುವ ಬಗ್ಗೆ ಮತ್ತು ಅದನ್ನು ಎಷ್ಟು ಉನ್ನತ ಮಟ್ಟದಲ್ಲಿ ಪಾಲಿಸಬೇಕು ಎನ್ನುವುದರ ಬಗ್ಗೆ ಪವಿತ್ರ ಖುರ್‌ಆನಿನ ಈ ವಚನದಲ್ಲಿ ವಿವರಿಸಲಾಗಿದೆ. ಬಹುತೇಕ ಜನರು ಈ ವಿಷಯ ತಿಳಿದು ಬಹಳ ಪ್ರಭಾವಿತರಾಗುತ್ತಾರೆ. ಅವರು ತಮ್ಮ ಅಭಿಪ್ರಾಯ ಹೇಳುವಾಗ ಇದರ ಬಗ್ಗೆ ಸಹ ಪ್ರಸ್ತಾಪಿಸುತ್ತಾರೆ. ಆದರೆ ನಮ್ಮ ಕೆಲಸ ಕೇವಲ ತತ್ವಗಳನ್ನು ವಿವರಿಸಿ ಅನ್ಯರನ್ನು ಪ್ರಭಾವಿತರನ್ನಾಗಿ ಮಾಡುವುದಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನೋದ್ದೇಶವನ್ನು ಮುಂದುವರಿಸಲು ನಾವು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸಿದ ಪ್ರತ್ಯಕ್ಷ ಪ್ರಮಾಣವನ್ನು ನಮ್ಮ ಅನುಷ್ಠಾನ ಕರ್ಮಗಳ ಮೂಲಕ ತೋರಿಸುವ ಆವಶ್ಯಕತೆ ಇದೆ. ಲೋಕವು ನಮ್ಮೊಂದಿಗೆ ಹೀಗೆ ಕೇಳಬಹುದಾಗಿದೆ: ನೀವು ಒಂದು ಜಮಾಅತ್ ವ್ಯವಸ್ಥೆಗೆ ಬದ್ಧರಾಗಿರುವಿರಿ. ನೀವು ಒಂದು ಕೈ ಎತ್ತಿದಾಗ ಎದ್ದೇಳುತ್ತೀರಿ, ಹಾಗೂ ಒಂದು ಕೈ ಸನ್ನೆಯಿಂದ ಕುಳಿತುಕೊಳ್ಳುತ್ತೀರಿ ಎಂಬ ವಾದ ಮಾಡುತ್ತಿರುವಿರಿ. ಹಾಗಿದ್ದರೆ, ಏನು ನಿಮ್ಮ ಜಮಾಅತಿನವರು ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ಪರಸ್ಪರ ಸಂಬಂಧ ಸ್ಥಾಪಿಸುವಾಗ ನೀವು ನ್ಯಾಯ ಮತ್ತು ಪ್ರಮಾಣಿಕತೆಯ ಬಗ್ಗೆ ಪವಿತ್ರ ಖುರ್‌ಆನ್ ವಿವರಿಸಿದ ಮಟ್ಟವನ್ನು ಕಾಪಾಡುತ್ತಿರುವಿರೇನು ಎಂದು ಅವರು ನಮ್ಮೊಡನೆ ಕೇಳಬಹುದಾಗಿದೆ.

ಅಲ್ಲಾಹನು ಪವಿತ್ರ ಖುರ್‌ಆನಿನ ಈ ವಚನದಲ್ಲಿ ಒಂದು ಕಡೆ **ಖಿಸ್ತ್** ಎಂಬ ಶಬ್ದ ಬಳಸಿದ್ದಾನೆ. ಇನ್ನೊಂದು ಕಡೆ **ಅದ್‌ಲ್** ಶಬ್ದ ಬಳಸಲಾಗಿದೆ. ಇದರ ಅರ್ಥ ಸಮಾನತೆ ಎಂದಾಗಿದೆ. ಪರಿಪೂರ್ಣ ನ್ಯಾಯಪಾಲನೆ ಮತ್ತು ಅತ್ಯುತ್ತಮ ಮಟ್ಟದ ನೈತಿಕ ಗುಣ. ಯಾವುದೇ ರೀತಿಯ ಪಕ್ಷಪಾತದಿಂದ ಪರಿಪೂರ್ಣವಾಗಿ ಪರಿಶುದ್ಧರಾಗಿದ್ದುಕೊಂಡು ಯಾವುದೇ ರೀತಿಯ ಪ್ರಭಾವಕ್ಕೊಳಗಾಗದೆ ನ್ಯಾಯ ಪಾಲನೆ ಮಾಡುವುದಾಗಿದೆ. ಹಾಗಿರುವಾಗ ನಮ್ಮ ಪೈಕಿ ಪ್ರತಿಯೊಬ್ಬನು ನೋಡಬೇಕಾದುದೇನೆಂದರೆ ನಾವು ಈ ವಿಷಯಗಳನ್ನು ನಮ್ಮ ಮುಂದೆ ಇರಿಸಿ ನಮ್ಮ ಕೆಲಸಗಳನ್ನು ನಿರ್ವಹಿಸುತ್ತಿದ್ದೇವೆಯೇ ಎಂದು. ಏನು, ನಾವು ಈ ನ್ಯಾಯಪಾಲನೆಯ ಉನ್ನತ ಮಟ್ಟವನ್ನು ಸ್ಥಾಪಿಸಲು ನಮ್ಮ ಸ್ವಂತದ ವಿರುದ್ಧವೇ ಸಾಕ್ಷ್ಯ ನೀಡಲು ಸಿದ್ಧರಿರುವೆವೋ? ನಾವು ಈ ಮಟ್ಟವನ್ನು ಕಾಪಾಡಲು ನಮ್ಮ ತಂದೆ ತಾಯಂದಿರ ವಿರುದ್ಧ ಸಾಕ್ಷ್ಯ ಹೇಳಲು ಸಿದ್ಧರಾಗಿರುವೆವೋ? ನ್ಯಾಯ ಸ್ಥಾಪನೆಗಾಗಿ ನಾವು ನಮ್ಮ ಸಮೀಪದ ಬಂಧುಗಳ ವಿರುದ್ಧ ಸಾಕ್ಷ್ಯ ನೀಡಲು ತಯಾರಿದ್ದೇವೆಯೋ? ಸಮೀಪ ಬಂಧುಗಳಲ್ಲಿ ಅತ್ಯಂತ ಸಮೀಪವಿರುವವರು ನಮ್ಮ ಮಕ್ಕಳಲ್ಲವೇ? ನಾವು ಈ ಮಟ್ಟವನ್ನು ಕಾಪಾಡಲು ನಮ್ಮ ಇಂದ್ರಿಯಶಕ್ತಿಗಳನ್ನು ಅದುಮಿ ಹಾಕಲು ಸಿದ್ಧರಾಗಿರುವೆವೋ? ಅದನ್ನು ಅನುಷ್ಠಾನಕ್ಕೆ ತರುವ ಸಾಮರ್ಥ್ಯ ನಮಗಿದೆಯೇ?

ಇವುಗಳು ಸಾಮಾನ್ಯ ವಿಷಯಗಳೇನೂ ಅಲ್ಲ. ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧ ಸೇವಕರಾಗಿ ಆಗಮಿಸಿದವರು ಈ ಉದಾಹರಣೆಗಳನ್ನು ಸ್ಥಾಪಿಸಿ ನಮಗೆ ತೋರಿಸಿಕೊಟ್ಟರು. ಒಂದು ಘಟನೆ ಹೀಗಿದೆ: ಖಾದಿಯಾನಿನ ಕೆಲವು ಕೃಷಿಕರೊಂದಿಗೆ ಅವರ ಕುಟುಂಬದ ಒಂದು ವ್ಯಾಜ್ಯ ಜಾರಿಯಲ್ಲಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನ್ಯಾಯಾಲಯದಲ್ಲಿ ಕೃಷಿಕರ ಪರವಾಗಿ ಸತ್ಯ ಹೇಳಿದ ಕಾರಣ ತನ್ನ ಕುಟುಂಬಕ್ಕೆ ಸಂಭವಿಸುವ ಆರ್ಥಿಕ ಹಾನಿ ಬಗ್ಗೆ ಲಕ್ಷ್ಯ ನೀಡಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕುಟುಂಬದ ಈ ಆಸ್ತಿಯ ಪಾಲುಗಾರರಲ್ಲಿ ಒಬ್ಬರಾಗಿದ್ದರು. ಹಾಗಿದ್ದೂ ಆ ಬಡ ಕೃಷಿಕರು ಅವರ ಸಾಕ್ಷ್ಯ ಪ್ರಕಾರ ವ್ಯಾಜ್ಯವನ್ನು ತೀರ್ಪು ಮಾಡಲು ಒಪ್ಪಿಗೆ ಸೂಚಿಸಿದರು. ಏಕೆಂದರೆ ಆ ಕೃಷಿಕರಿಗೆ ತಿಳಿದಿತ್ತು– ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯ ಮತ್ತು ನ್ಯಾಯಯುತ ಸಾಕ್ಷ್ಯ ನೀಡುವರೆಂದು. ಅದೇ ರೀತಿ ಸಂಭವಿಸಿತು. ಅವರು ಆ ಕೃಷಿಕರ ಪರವಾಗಿ ಹೇಳಿಕೆ ನೀಡಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ನಂಬುವವರು ಸಹ ಇಂತಹ ಉನ್ನತ ಮಟ್ಟವನ್ನು ಹೊಂದಬೇಕೆಂದು ಬಯಸುತ್ತಾರೆ. ಆದುದರಿಂದ ಅವರು ಎಂತಹ ಜಮಾಅತನ್ನು ಸ್ಥಾಪಿಸಲು ಬಯಸಿದರೆಂದರೆ ಆ ಜಮಾಅತ್ ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವವರಾಗಬೇಕೆಂದು. ಅದರ ಒಳಿತುಗಳ ಮಟ್ಟ ಉನ್ನತವಾಗಬೇಕೆಂದು. ಇದೇ ಕಾರಣದಿಂದ ಪವಿತ್ರ ಖುರ್‌ಆನಿನ ಅಧಿಕಾರವನ್ನು ಪರಿಪೂರ್ಣವಾಗಿ ನಮ್ಮ ಶಿರಗಳು ಹೊರಬೇಕೆಂಬ ಪ್ರತಿಜ್ಞೆಯನ್ನು ಅವರು ನಮ್ಮಿಂದ ಮಾಡಿಸಿದ್ದಾರೆ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: وَلَا يَجْرِمَنَّكُمْ شَنَآنُ قَوْمٍ عَلَى أَلَّا تَعْدِلُوا اعْدِلُوا هُوَ أَقْرَبُ لِلتَّقْوَى **ವಲಾ ಯಜ್‌ರಿಮನ್ನಕುಮ್ ಶನಆನು ಖೌಮಿನ್ ಅಲಾ ಅಲ್ಲಾ ತಅ್‌ದಿಲೂ ಇಅ್‌ದಿಲೂ ಹುವ ಅಖ್‌ರಬು ಲಿತ್ತಖ್ವಾ.** ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವ ಭಕ್ತಿಗೆ ಅತಿ ಸಮೀಪವಾದುದು. (ಪವಿತ್ರ ಖುರ್‌ಆನ್ 5:9)

ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಶತ್ರು ಜನಾಂಗಗಳ ಶತ್ರುತ್ವ ನಿಮ್ಮನ್ನು ನ್ಯಾಯಯುತವಾಗಿ ವರ್ತಿಸುವುದರಿಂದ

ತಡೆಯದಿರಲಿ. ನೀವು ನ್ಯಾಯಪಾಲನೆ ಮಾಡಿ. ತಖ್ವ (ಭಯಭಕ್ತಿ) ಇದರಲ್ಲಿಯೇ ಅಡಕವಾಗಿದೆ. ನಾನು ಸತ್ಯವಾಗಿ ಹೇಳುತ್ತೇನೆ. ಶತ್ರುವಿನೊಂದಿಗೆ ಪ್ರೀತಿಯಿಂದ ವರ್ತಿಸುವುದು ಸುಲಭವಾಗಿದೆ. ಆದರೆ ಶತ್ರುವಿನ ಹಕ್ಕುಗಳನ್ನು ಸಂರಕ್ಷಿಸುವುದು, ಮೊಕದ್ದಮೆಗಳಲ್ಲಿ ನ್ಯಾಯ ಮತ್ತು ಸಮಭಾವನೆ ಕಾಪಾಡುವುದು ಬಹಳ ಕಷ್ಟದ ಕೆಲಸವಾಗಿದೆ. ಅದು ಶೂರರು ಮಾತ್ರ ಮಾಡಬಹುದಾದ ಕೆಲಸವಾಗಿದೆ. ಬಹುತೇಕ ಜನರು ತಮ್ಮ ಸಹಭಾಗಿಗಳಾದ ವಿರೋಧಿಗಳೊಂದಿಗೆ ಪ್ರೀತಿಯಿಂದ ವರ್ತಿಸಿ ಸಿಹಿ ಮಾತುಗಳನ್ನು ಆಡುತ್ತಾರೆ. ಆದರೆ ಅವರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಾರೆ. ಒಬ್ಬ ಸಹೋದರ ಇನ್ನೊಬ್ಬ ಸಹೋದರನೊಂದಿಗೆ ಪ್ರೀತಿ ತೋರಿಸಿ ಆ ಮೂಲಕ ಮೋಸಮಾಡಿ ಅವನ ಹಕ್ಕುಗಳನ್ನು ಕಸಿದುಕೊಳ್ಳುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತಿನ ಜನರ ಬಗ್ಗೆ ಪ್ರತೀಕ್ಷಿಸುವುದೇನೆಂದರೆ ಅವರ ನೈತಿಕ ಮಟ್ಟ ಉನ್ನತವಾಗಿರಬೇಕು. ಅವರ ಕರ್ಮಗಳು ಪವಿತ್ರ ಖುರ್‌ಆನಿನ ಆಜ್ಞೆಗಳ ಪ್ರಕಾರವಾಗಿರಬೇಕು. ಹಕ್ಕುಗಳನ್ನು ಕಸಿದುಕೊಳ್ಳುವ ಮತ್ತು ಅನ್ಯಾಯದಿಂದ ವರ್ತಿಸುವವರಾಗಬಾರದು. ಯಾರಿಗಾದರೂ ತೀರ್ಪು ನೀಡುವ ಅಧಿಕಾರ ದೊರೆತರೆ ಎಲ್ಲ ಕುಟುಂಬ ಸಂಬಂಧಗಳನ್ನು ಮೀರಿದ ತೀರ್ಪು ನೀಡಬೇಕು. ತೀರ್ಪಿನಿಂದ ತನಗೆ ಹಾನಿ ಆಗುವುದಾದರೂ, ತನ್ನ ತಂದೆ ತಾಯಂದಿರಿಗೆ ಹಾನಿ ಆಗುವುದಾದರೂ, ಸಂಬಂಧಿಕರಿಗೆ ಹಾನಿ ಆಗುವುದಾದರೂ, ಸ್ವಂತ ಮಕ್ಕಳಿಗೆ ಹಾನಿ ಸಂಭವಿಸುವುದಾದರೂ ನ್ಯಾಯ ಪಾಲನೆಯ ಉನ್ನತ ಮಟ್ಟವನ್ನು ಕಾಪಾಡಲೇಬೇಕು. ಈ ಮಾದರಿಯನ್ನು ನಾವು ಪರಸ್ಪರ ಸ್ಥಾಪಿಸುವುದಾದರೆ ನಾವು ಲೋಕದ ಜನರೊಂದಿಗೆ ಹೇಳಬಹುದು: ನಾವು ಎಂತಹ ಜನರಾಗಿದ್ದೇವೆ ಎಂದರೆ ನಾವು ನಮ್ಮಲ್ಲಿ ಬದಲಾವಣೆ ಉಂಟುಮಾಡಿದ್ದೇವೆ. ನಾವು ಇಸ್ಲಾಮಿನ ತತ್ವಗಳನ್ನು ಅನುಷ್ಠಾನಕ್ಕೆ ತಂದು ಶತ್ರುಗಳೊಂದಿಗೆ ಸಹ ನ್ಯಾಯಬದ್ಧವಾಗಿ ವರ್ತಿಸುವ ಸಾಮರ್ಥ್ಯ ಹೊಂದಿದ್ದೇವೆ. ಮತ್ತು ಅದೇ ರೀತಿ ವರ್ತಿಸುತ್ತಿದ್ದೇವೆ. ನಾವು ಸತ್ಯವಾದ ಸಾಕ್ಷ್ಯ ಹೇಳುತ್ತೇವೆ. ಅದು ನಮ್ಮ ವಿರುದ್ಧವಾಗಿರಲಿ, ನಮ್ಮ ತಂದೆ ತಾಯಂದಿರ ವಿರುದ್ಧವಾಗಿರಲಿ, ನಮ್ಮ ಸಂಬಂಧಿಕರ ಅಥವಾ ನಮ್ಮ ಮಕ್ಕಳ ವಿರುದ್ಧವಾಗಿರಲಿ, ನಾವು ನ್ಯಾಯವನ್ನು ಕೈ ಬಿಡಲಾರೆವು ಎಂದು. ಈ ಮಾದರಿಯನ್ನು ನಾವು ಸ್ಥಾಪಿಸುವುದು ಏಕೆಂದರೆ ಮುಂದೆ ಲೋಕಕ್ಕೆ ಮಾರ್ಗದರ್ಶನ ನೀಡಬೇಕಾದವರು ನಾವಾಗಿದ್ದೇವೆ. ನಾವು ಈ ಮಾದರಿಯನ್ನು ಸ್ಥಾಪಿಸುವುದಿಲ್ಲವಾದರೆ ನಾವು ಅಲ್ಲಾಹನ ಆಜ್ಞೆಗಳಿಂದ ದೂರ ಸರಿಯುವವರೂ ನಾವು ಮಾಡಿದ ಪ್ರತಿಜ್ಞೆಗಳನ್ನು ಪಾಲಿಸದೆ ವಂಚಿಸುವವರೂ ಆಗುತ್ತೇವೆ.

ಆದುದರಿಂದ ಪ್ರತಿಯೊಬ್ಬ ಅಹ್ಮದಿ ಮತ್ತು ವಿಶಿಷ್ಟವಾಗಿ ಹುದ್ದೇದಾರರು ನೋಡಬೇಕಾದುದೇನೆಂದರೆ ಅವರು ತಮಗೆ ವಹಿಸಿಕೊಟ್ಟ ಅಮಾನತ್‌ಗಳ ಹಕ್ಕುಗಳನ್ನು ಈಡೇರಿಸುವಾಗ ನ್ಯಾಯ ಮತ್ತು ಸಮಾನತೆಯ ಮಟ್ಟವನ್ನು ಎಷ್ಟರ ಮಟ್ಟಿಗೆ ಸ್ಥಾಪಿಸುತ್ತಿದ್ದಾರೆಂದು. ಅವರ ಪ್ರತಿಯೊಂದು ತೀರ್ಮಾನ ನ್ಯಾಯದ ಉನ್ನತ ಮಟ್ಟವನ್ನು ಗಳಿಸುವ ರೀತಿಯಲ್ಲಿರಬೇಕು. ನಾನು ಕೆನಡಕ್ಕೆ ಹೋದಾಗ ಅಲ್ಲಿ ಸಹ ಕೆಲವು ಹುದ್ದೇದಾರರ ವಿರುದ್ಧ ಜನರು ದೂರು ನೀಡಿದ್ದಾರೆ. ಅವರು ನ್ಯಾಯಪಾಲನೆ ಮಾಡುವುದಿಲ್ಲ ಎಂದು. ಪ್ರತಿಯೊಂದು ವಿಭಾಗದವರು ಮಾಡಬೇಕಾದುದೇನೆಂದರೆ ಅವರು ತಮ್ಮ ಪೂರ್ಣ ಸಾಮರ್ಥ್ಯ ಬಳಸಿ, ಚಿಂತಿಸಿ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿ ತಮ್ಮ ತೀರ್ಮಾನ ಕೈಗೊಳ್ಳಬೇಕು. ಸರಿಯಾದ ತೀರ್ಮಾನವಾಗಲಿ ಎಂದು ಸಹಾಯವನ್ನು ಅಲ್ಲಾಹನಿಂದ ಬೇಡಿಕೊಳ್ಳಿರಿ. ಯಾವುದೇ ತೀರ್ಮಾನ ಮಾಡುವ ಮೊದಲು ಪ್ರಾರ್ಥನೆ (ದುಆ) ಮಾಡುವುದು ಆವಶ್ಯಕವಾಗಿದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: وَالَّذِينَ هُمْ لِأَمَانَاتِهِمْ وَعَهْدِهِمْ رَاعُونَ **ವಲ್ಲಝೀನ ಹುಮ್ ಲಿಅಮಾನಾತಿಹಿಮ್ ವಅಹ್‌ದಿಹಿಮ್ ರಾಊನ್.** 'ಸತ್ಯ ವಿಶ್ವಾಸಿಗಳು ತಮ್ಮ ಅಮಾನತ್‌ಗಳನ್ನು ಮತ್ತು ಪ್ರತಿಜ್ಞೆಗಳನ್ನು ಲಕ್ಷ್ಯದಲ್ಲಿರಿಸುತ್ತಾರೆ.' (23:9). ನಾನು ಹೇಳುವುದು ಕೇಂದ್ರದ ಹುದ್ದೇದಾರರ ಬಗ್ಗೆ ಮಾತ್ರ ಎಂದು ಭಾವಿಸಬೇಡಿರಿ. ಎಲ್ಲ ಅಧ್ಯಕ್ಷರು ಮತ್ತು ಮಜ್ಲಿಸ್ ಆಮಿಲದ ಸದಸ್ಯರು ಸಹ ಇದರಲ್ಲಿ ಸೇರಿದ್ದಾರೆ. ಅವರು ತಮ್ಮನ್ನು ಪರಿಶೋಧಿಸಬೇಕು. ಅವರು ನ್ಯಾಯದ ಎಲ್ಲ ಆವಶ್ಯಕತೆಗಳನ್ನು ಈಡೇರಿಸುತ್ತಾ ಇದ್ದಾರೆಯೇ ಎಂದು ನೋಡಬೇಕು. ಕೆನಡಕ್ಕೆ ಸಂಬಂಧಿಸಿ ಮಾತ್ರ ದೂರು ಇರುವುದಲ್ಲ. ಜರ್ಮನಿಯಿಂದಲೂ, ಇಲ್ಲಿಂದಲೂ ಇತರ ಕೆಲವು ದೇಶಗಳಿಂದಲೂ ದೂರುಗಳು ಲಭಿಸಿವೆ. ಆದುದರಿಂದ ಹುದ್ದೇದಾರರು ತಮ್ಮ ವರ್ತನೆಗಳನ್ನು ಸರಿಪಡಿಸಬೇಕಾದುದರ ಆವಶ್ಯಕತೆ ಇದೆ. ಹೀಗೆ ಮಾಡದಿದ್ದರೆ ನ್ಯಾಯಪಾಲನೆಯ ಆವಶ್ಯಕತೆ ಈಡೇರಿಸದೆ, ಅಮಾನತ್‌ಗಳನ್ನೂ ಪ್ರತಿಜ್ಞೆಗಳನ್ನೂ ಲಕ್ಷಿಸದೆ, ವಿಶ್ವಾಸ ವಂಚನೆ ಮಾಡುವವರಾಗುವಿರಿ. ಅಲ್ಲಾಹನು ಹೇಳುತ್ತಾನೆ– ವಿಶ್ವಾಸ ವಂಚನೆ ಮಾಡುವವರನ್ನು ಅಲ್ಲಾಹನು ಇಷ್ಟಪಡುವುದಿಲ್ಲ ಎಂದು. ಸೇವೆ ಮಾಡಿ ಪುಣ್ಯಗಳಿಸುವುದರ ಬದಲಾಗಿ ಇಂತಹ ಜನರು ಅನ್ಯಾಯ ಮಾಡಿ ಅಹಂಭಾವದಿಂದ ವರ್ತಿಸಿ ಅಲ್ಲಾಹನ ಕೋಪವನ್ನು ಗಳಿಸುವವರಾಗುತ್ತಾರೆ. ಆದುದರಿಂದ ನಮ್ಮ ಹುದ್ದೇದಾರರು ತಮ್ಮನ್ನು ಪರಿಶೋಧಿಸಬೇಕು. ತಾವು ಅಲ್ಲಾಹನು ಹೇಳಿದ ತತ್ವಗಳ ಪ್ರಕಾರ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುತ್ತಾ ಇದ್ದಾರೆಯೋ ಎಂದು. ಅವರು ತಮ್ಮ ಕೆಲಸಕ್ಕೆ ಸಂಬಂಧಿಸಿ ನ್ಯಾಯದಿಂದ ವರ್ತಿಸುತ್ತಾ ಇದ್ದಾರೆಯೇ? ತಾವು ಯಾರೊಂದಿಗೆ ವ್ಯವಹರಿಸುತ್ತಾರೋ ಅವರೊಂದಿಗೆ ಸಹ ನ್ಯಾಯದಿಂದ ವರ್ತಿಸುತ್ತಾರೆಯೇ ಎಂದು ಪರಿಶೋಧಿಸಬೇಕು. ಸದರ್ ಆಗುವುದು, ಸೆಕ್ರೆಟರಿ ಆಗುವುದು, ಅಥವಾ ಅಮೀರ್ ಆಗುವುದು ಮುಖ್ಯವಲ್ಲ. ಈ ಹುದ್ದೆಗಳು ಯಾರನ್ನಾದರೂ ಅಲ್ಲಾಹನ ಕ್ಷಮೆಗೆ ಪಾತ್ರರನ್ನಾಗಿಸುವುದೂ ಇಲ್ಲ.

ಅಲ್ಲಾಹನಿಗೆ ಮತ್ತು ಅವನ ಜಮಾಅತಿಗೆ ಅವರು ಉಪಕಾರವನ್ನೇನೂ ಮಾಡುವುದೂ ಇಲ್ಲ. ಅಲ್ಲಾಹನು ಇಚ್ಛಿಸುವ ಹಾಗೆ ತಮ್ಮ ಅಮಾನತ್‌ಗಳನ್ನೂ ತಮ್ಮ ಪ್ರತಿಜ್ಞೆಗಳನ್ನೂ ಈಡೇರಿಸುವುದಿಲ್ಲವಾದರೆ ಯಾವುದೇ ಪ್ರಯೋಜನವಿಲ್ಲ. ಆದುದರಿಂದ ಅಲ್ಲಾಹನಿಗೆ ನಿಷ್ಠಾವಂತರಾಗಿ ಪ್ರತಿಯೊಬ್ಬ ಹುದ್ದೇದಾರ ಕೆಲಸ ಮಾಡಬೇಕಾಗಿದೆ. ಪ್ರತಿಯೊಂದು ತೀರ್ಮಾನ ನ್ಯಾಯದ ಆವಶ್ಯಕತೆಗಳನ್ನು ಈಡೇರಿಸುವಂತಹದು ಆಗಿರಬೇಕು. ಯಾವುದಾದರೂ ವಿಷಯಕ್ಕೆ ಸಂಬಂಧಿಸಿ ತಪ್ಪು ತೀರ್ಮಾನ ಈಗಾಗಲೇ ಮಾಡಿದ್ದರೆ, ಆ ತಪ್ಪನ್ನು ಒಪ್ಪಿಕೊಂಡು ಆ ತೀರ್ಮಾನಗಳನ್ನು ಸರಿಪಡಿಸಿರಿ. ನಿಮ್ಮ ಸ್ವಭಾವ ಗುಣಗಳನ್ನೂ ಸರಿಪಡಿಸಿರಿ. ಅಲ್ಲಾಹನು ಹೇಳಿದ قُولُوا لِلنَّاسِ حُسْنًا **ಖೂಲೂ ಲಿನ್ನಾಸಿ ಹುಸ್‌ನ** (ಜನರೊಂದಿಗೆ ಮೃದುವಾಗಿ, ಸೌಮ್ಯವಾಗಿ, ಸುಸ್ವಭಾವದಿಂದ ಮಾತನಾಡಿರಿ) ಎಂಬ ಆಜ್ಞೆ ಪಾಲಿಸಿರಿ. ನಾನು ಹೇಳಿದ ಹಾಗೆ ಪ್ರತಿಯೊಂದು ದೇಶದ ಹುದ್ದೇದಾರರು ತಮ್ಮನ್ನು ಪರಿಶೋಧಿಸಬೇಕಾದ ಆವಶ್ಯಕತೆ ಇದೆ. ನಾವು ಪ್ರತಿಯೊಂದಕ್ಕೆ ಸಂಬಂಧಿಸಿ ನಮ್ಮ ಉತ್ತಮ ಉದಾಹರಣೆ ಸ್ಥಾಪಿಸಬೇಕು. ಪ್ರತಿಯೊಬ್ಬ ಅಹ್ಮದಿ ಮತ್ತು ವಿಶಿಷ್ಟವಾಗಿ ನಮ್ಮ ಪ್ರತಿಯೊಬ್ಬ ಹುದ್ದೇದಾರ ಲೋಕಕ್ಕೆ ಅನುಕರಣೀಯರಾಗಿ ಮಾದರಿಯಾಗಬೇಕು.

ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದೇನೆಂದರೆ ಹೊಣೆಗಾರಿಕೆ ಇರುವುದು ಕೇವಲ ಹುದ್ದೇದಾರರಿಗೆ ಮಾತ್ರ ಅಲ್ಲ. ಪ್ರತಿಯೊಬ್ಬ ಅಹ್ಮದಿಗೆ ಸಹ ಹೊಣೆಗಾರಿಕೆ ಇದೆ. ಪ್ರತಿಯೊಬ್ಬ ಅಹ್ಮದಿಯ ಹೊಣೆಗಾರಿಕೆ ಏನೆಂದರೆ ಪರಸ್ಪರ ಸಂಬಂಧದಲ್ಲಿ ಅನುಕರಣೀಯ ಮಾದರಿಯನ್ನು ಹೊಂದಬೇಕು. ನ್ಯಾಯದ ಆವಶ್ಯಕತೆಗಳನ್ನು ಈಡೇರಿಸಬೇಕು. ತನ್ನ ಸ್ವಭಾವಗುಣಗಳನ್ನು ಉನ್ನತ ಮಟ್ಟಕ್ಕೇರಿಸಬೇಕು. ಒಬ್ಬರಿನ್ನೊಬ್ಬರ ವ್ಯವಹಾರಗಳಲ್ಲಿ ಯಾವುದೇ ರೀತಿಯ ಪಕ್ಷಪಾತ ಮಾಡುವುದರಿಂದ ಪೂರ್ಣವಾಗಿ ತನ್ನನ್ನು ದೂರಸರಿಸಬೇಕು. ಯಾವುದೇ ಕಡೆಗೆ ಬಾಗುವವನಾಗಬಾರದು ಅಹ್ಮದಿಯ ಸಾಕ್ಷ್ಯ ಮತ್ತು ಹೇಳಿಕೆ ನ್ಯಾಯ ಮತ್ತು ಸತ್ಯದಿಂದ ಭರಿತವಾಗಿದ್ದು ಅದು ಇತರರಿಗೆ ಮಾದರಿಯಾಗಿರಬೇಕು. ಒಬ್ಬ ಅಹ್ಮದಿ ಹೇಳಿದ ಸಾಕ್ಷ್ಯವು ಸುಳ್ಳಾಗಿರಲಾರದು ಎಂದು ಲೋಕವು ಹೇಳುವಂತಿರಬೇಕು. ಏಕೆಂದರೆ ಸಾಕ್ಷ್ಯ ನ್ಯಾಯದ ಉನ್ನತ ಮಟ್ಟವನ್ನು ತಲಪಿದೆ. ನಾವು ಈ ರೀತಿ ವರ್ತಿಸುವವರಾದರೆ ಮಾತ್ರ ನಾವು ಮಾಡುವ ಭಾಷಣಗಳು, ಮಾತುಗಳು, ನಾವು ಮಾಡುವ ತಬ್ಲೀಗ್ ಕೂಡ ಸತ್ಯ ರೂಪದಲ್ಲಿರುತ್ತವೆ. ಇಲ್ಲದಿದ್ದರೆ ಬೇರೆ ಜನರು ಹೇಗೆ ಇದ್ದಾರೋ ಹಾಗೆಯೇ ನಾವಿದ್ದೇವೆ.

ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದೇನೆಂದರೆ ನಾವು ಎಲ್ಲ ಕೆಡುಕುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವೆವೆಂದು ನಾವು ಪ್ರತಿಜ್ಞೆ ಮಾಡಿದ್ದೇವೆ. ಪ್ರತಿಜ್ಞೆಯನ್ನು ಕಡೆಗಣಿಸುವುದು ಮತ್ತು ಪ್ರಜ್ಞಾಪೂರ್ವಕವಾಗಿ ಅದನ್ನು ಈಡೇರಿಸದಿರುವುದು ವಂಚನೆಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಒಬ್ಬ ವಾಸ್ತವಿಕ ಸತ್ಯವಿಶ್ವಾಸಿಯ ಚಿಹ್ನೆಯಾಗಿ ಹೀಗೆ ಹೇಳಿದ್ದಾರೆ: ಒಬ್ಬನ ಹೃದಯದಲ್ಲಿ ಸತ್ಯವಿಶ್ವಾಸ ಮತ್ತು ಅವಿಶ್ವಾಸ, ಸತ್ಯ ಮತ್ತು ಸುಳ್ಳು ಒಟ್ಟಿಗೆ ಇರಲಾರದು. ಅಮಾನತ್ ಮತ್ತು ಖಿಯಾನತ್ (ವಿಶ್ವಸ್ತತೆ ಮತ್ತು ವಂಚನೆ) ಸಹ ಒಟ್ಟಿಗೆ ಇರಲಾರದು. ಇನ್ನೊಂದು ಹದೀಸಿನಲ್ಲಿ ಪ್ರಸ್ತಾಪಿಸಲ್ಪಟ್ಟದ್ದನ್ನು ಹುದ್ದೇದಾರರು ಸಹ ತಮ್ಮ ಮುಂದೆ ಇರಿಸಬೇಕು. ಪ್ರತಿಯೊಬ್ಬ ಅಹ್ಮದಿ ಸಹ ಅವುಗಳನ್ನು ಗಮನಿಸಬೇಕು. ಆ ಹದೀಸ್ ಹೀಗೆ: ಮೂರು ವಿಷಯಗಳಿಗೆ ಸಂಬಂಧಿಸಿ ಮುಸ್ಲಿಮನ ಹೃದಯ ವಂಚನೆ ಮಾಡಬಾರದು. ಆ ಮೂರು ವಿಷಯಗಳು ಯಾವುವೆಂದರೆ: ಅಲ್ಲಾಹನಿಗೋಸ್ಕರ ಮಾಡುವ ಕೆಲಸದಲ್ಲಿ ನಿಷ್ಠೆ ಮೊದಲನೆಯದು, ಎರಡನೆಯದಾಗಿ ಮುಸ್ಲಿಮರ ಬಗ್ಗೆ ಹಿತಕಾಂಕ್ಷೆ, ಮೂರನೆಯದು ಮುಸ್ಲಿಮರ ಜಮಾಅತ್‌ನೊಂದಿಗೆ ಸೇರಿ ಜೀವಿಸುವುದು.

ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಗೆ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವವರಾಗಲು ಭಾಗ್ಯ ದಯಪಾಲಿಸಲಿ. ಸಾಕ್ಷ್ಯ ನೀಡಬೇಕಾದ ಸಂದರ್ಭ ಉಂಟಾದರೆ ಅದರಲ್ಲಿ ಎಂದೂ ವಂಚನೆ ಮಾಡಬಾರದು. ಜಮಾಅತಿನ ಪ್ರತಿಯೊಬ್ಬ ಹುದ್ದೇದಾರ ತನ್ನ ಹೊಣೆಗಾರಿಕೆಯನ್ನು ಮನವರಿಕೆ ಮಾಡಲಿ. ತನ್ನ ಹುದ್ದೆಯ ಜವಬ್ದಾರಿಗಳನ್ನು ಮತ್ತು ಅಮಾನತ್‌ಗಳನ್ನು ಈಡೇರಿಸುವವನಾಗಲಿ. ತನ್ನ ಎಲ್ಲ ಹೊಣೆಗಾರಿಕೆಗಳನ್ನು ನ್ಯಾಯದ ಆವಶ್ಯಕತೆಗಳನ್ನು ಈಡೇರಿಸುವ ರೀತಿಯಲ್ಲಿ ಪೂರ್ಣಗೊಳಿಸುವವನಾಗಲಿ. ಈ ಸುಂದರ ಉಪದೇಶಗಳು ನಮ್ಮ ಸಂತಾನಗಳಲ್ಲೂ ಜಾರಿಯಲ್ಲಿರಲಿ. ಅದಕ್ಕೋಸ್ಕರ ನಾವು ಪ್ರಯತ್ನ ಸಹ ಮಾಡಬೇಕು. ಹಾಗಿದ್ದಲ್ಲಿ ಮಾತ್ರ ಸಂದರ್ಭ ಸಿಗುವಾಗ ನಾವು ಲೋಕದಲ್ಲಿ ವಾಸ್ತವಿಕವಾಗಿ ನ್ಯಾಯಪಾಲನೆ ಮಾಡಿ ತೋರಿಸುವವರಾಗುವೆವು. ಅಂತಹ ನ್ಯಾಯವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದರು. ಅದರ ಉದಾಹರಣೆಯನ್ನು ಅವರ ಸತ್ಯಸಂಧನಾದ ಸೇವಕ ಸ್ಥಾಪಿಸಿದರು. ಅವರು ತನ್ನನ್ನು ನಂಬುವವರ ಬಗ್ಗೆ ಸಹ ಅದರ ಪ್ರತೀಕ್ಷೆಯನ್ನಿಟ್ಟರು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ದಯಪಾಲಿಸಲಿ – ಆಮೀನ್.

ಜುಮುಅ ನಮಾಝ್ ನಂತರ ಕೆಲವು ಜನಾಝು ಗಾಯಿಬ್ ನಮಾಝ್‌ಗಳಿವೆ. ಮೊದಲನೆಯ ಜನಾಝು, ಮುಕರ್‍ರಮ್ ಅದ್‌ನಾನ್ ಮುಹಮ್ಮದ್ ಕರ್‌ದಿಯ್ಯ ಸಾಹಿಬ್‌ರದು. ಅವರು ಸಿರಿಯಾದ ಹಲ್‌ಬ್ ನಿವಾಸಿಯಾಗಿದ್ದರು. 2013ರಲ್ಲಿ ಸಿರಿಯಾದ ಒಂದು ಭಯೋತ್ಪಾದಕ ಗುಂಪು ಅವರನ್ನು ಅಪಹರಣ ಮಾಡಿತ್ತು. ಅನಂತರ ಅವರನ್ನು ಶಹೀದರನ್ನಾಗಿ ಮಾಡಲಾಗಿದೆ. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಎರಡನೆಯ ಜನಾಝು, ಬಶೀರ ಬೇಗಮ್ ಸಾಹಿಬರದು. (ಮನ್‌ಝೂರ್ ಅಹ್ಮದ್ ಚೀಮಾ ದರ್‌ವೇಶ್‌ರವರ ಪತ್ನಿ). ಅವರು 7–11–2016ರಂದು ತನ್ನ 93ನೇ ವಯಸ್ಸಿನಲ್ಲಿ

ನಿಧನ ಹೊಂದಿದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಮೂರನೆಯ ಜನಾಝ, ಮುಕರ್ರಮ್ ರಾನಾ ಮುಬಾರಕ್ ಅಹ್ಮದ್ ಸಾಹಿಬ್‌ರದು. ಅವರು ಲಾಹೋರಿನಿಂದ ಇಲ್ಲಿಗೆ ಬಂದು ವಾಸಿಸುತ್ತಿದ್ದರು. ಅವರು 5–11–2016ರಂದು ತನ್ನ 78ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. (ಇವರೆಲ್ಲರ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲಾಯಿತು).

*****

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 25-11-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon